Akashvani: Bangalore
National Bulletin In Kannada
07.02.2026 : 7.35AM

**ಆಕಾಶವಾಣಿ, ಬೆಂಗಳೂರು**

**ರಾಷ್ಟ್ರೀಯ ವಾರ್ತೆಗಳು**

07.02.2026 : 7.35AM

********

**ಮುಖ್ಯಾಂಶಗಳು :**

1. ಮಲೇಷ್ಯಾಕ್ಕೆ ಇಂದಿನಿಂದ ಪ್ರಧಾನಿ ನರೇಂದ್ರ ಮೋದಿ ಎರಡು ದಿನಗಳ ಭೇಟಿ
2. ಡಿಆರ್‌ಡಿಒ ಅಭಿವೃದ್ಧಿಪಡಿಸಿರುವ ಅಗ್ನಿ-೩ ಖಂಡಾಂತರ ಕ್ಷಿಪಣಿ ಪರೀಕ್ಷೆ ಯಶಸ್ವಿ
3. ಪಾಕಿಸ್ತಾನದ ಇಸ್ಲಾಮಾಬಾದ್‌ನಲ್ಲಿ ಆತ್ಮಾಹುತಿ ಬಾಂಬ್ ದಾಳಿ; ಮೃತರ ಸಂಖ್ಯೆ ೩೧ಕ್ಕೆ ಏರಿಕೆ
4. ಹತ್ತೊಂಬತ್ತು ವರ್ಷದೊಳಗಿನವರ ಐಸಿಸಿ ಏಕದಿನ ವಿಶ್ವಕಪ್ ಕ್ರಿಕೆಟ್; ಚಾಂಪಿಯನ್ ಆಗಿ ಹೊರಹೊಮ್ಮಿದ ಭಾರತ

**********

ಎರಡು ದಿನಗಳ ಮಲೇಷ್ಯಾ ಭೇಟಿಗಾಗಿ ಪ್ರಧಾನಿ ನರೇಂದ್ರ ಮೋದಿ ಇಂದು ಕೌಲಾಲಂಪುರಕ್ಕೆ ತೆರಳಲಿದ್ದಾರೆ. ಉಭಯ ದೇಶಗಳ ನಡುವೆ ಸಮಗ್ರ ಕಾರ್ಯತಂತ್ರದ ಪಾಲುದಾರಿಕೆಯನ್ನು ಬಲಗೊಳಿಸುವುದು ಸೇರಿದಂತೆ ಸಂಬಂಧಗಳ ಸಂಪೂರ್ಣ ವ್ಯಾಪ್ತಿಯನ್ನು ಪರಿಶೀಲಿಸಲಿದ್ದಾರೆ. ವ್ಯಾಪಾರ ಮತ್ತು ಆರ್ಥಿಕತೆ, ಉದಯೋನ್ಮುಖ ತಂತ್ರಜ್ಞಾನ, ಇಂಧನ, ಶಿಕ್ಷಣ ಸೇರಿದಂತೆ ಪ್ರಮುಖ ಕ್ಷೇತ್ರಗಳಲ್ಲಿ ಸಹಕಾರವನ್ನು ಬಲಪಡಿಸುವತ್ತ ಚರ್ಚೆಗಳು ಗಮನಹರಿಸಲಿವೆ ಎಂದು ಮಲೇಷ್ಯಾದಲ್ಲಿನ ಭಾರತದ ಹೈಕಮಿಷನರ್ ಬಿ.ಎನ್. ರೆಡ್ಡಿ ತಿಳಿಸಿದ್ದಾರೆ. ಕೌಲಾಲಂಪುರದಲ್ಲಿ 'ಸಲಾಮತ್ ದತಾಂಗ್ ಮೋದಿ ಜಿ' ಎಂಬ ಶೀರ್ಷಿಕೆಯ ಭಾರತೀಯ ಸಮುದಾಯದಿಂದ ಕಾರ್ಯಕ್ರಮ ನಡೆಯಲಿದೆ. ಇದು ಎರಡೂ ದೇಶಗಳ ನಡುವಿನ ಬಲವಾದ ಜನರ-ಜನರ ಸಂಬಂಧಗಳನ್ನು ಪ್ರತಿಬಿಂಬಿಸುತ್ತದೆ. ಈ ಕಾರ್ಯಕ್ರಮವು ಮಲೇಷ್ಯಾದಾದ್ಯಂತದ ಕಲಾವಿದರ ಸಾಂಸ್ಕೃತಿಕ ಪ್ರದರ್ಶನಗಳೊಂದಿಗೆ ಬೃಹತ್ ಭಾಗವಹಿಸುವಿಕೆಗೆ ಸಾಕ್ಷಿಯಾಗುವ ನಿರೀಕ್ಷೆಯಿದೆ ಎಂದು ಅವರು ಹೇಳಿದ್ದಾರೆ. ಈ ಕಾರ್ಯಕ್ರಮ ಉದ್ದೇಶಿಸಿ ಪ್ರಧಾನಿ ನರೇಂದ್ರ ಮೋದಿ ಮತ್ತು

ಮಲೇಷ್ಯಾ ಪ್ರಧಾನಿ ಅನ್ವರ್ ಇಬ್ರಾಹಿಂ ಮಾತನಾಡಲಿದ್ದಾರೆ. ಬಳಿಕ ನಾಳೆ ನಿಯೋಗ ಮಟ್ಟದ ಮಾತುಕತೆಗಳು ಮತ್ತು ತಿಳುವಳಿಕೆ ಪತ್ರಗಳ ವಿನಿಮಯ ಆಗಲಿದೆ ಎಂದು ಬಿ.ಎನ್. ರೆಡ್ಡಿ ತಿಳಿಸಿದ್ದಾರೆ.

**********

ಭಾರತದ ಡಿಜಿಟಲ್ ಮತ್ತು ಫಿನ್‌ಟೆಕ್ ಪರಿಸರ ವ್ಯವಸ್ಥೆಯು ವಿಸ್ತರಿಸುತ್ತಿರುವಂತೆ ಆರ್ಥಿಕ ಸೇರ್ಪಡೆ, ತಂತ್ರಜ್ಞಾನದ ಜವಾಬ್ದಾರಿಯುತ ಬಳಕೆ ಮತ್ತು ಮಹಿಳೆಯರ ಹೆಚ್ಚಿನ ಭಾಗವಹಿಸುವಿಕೆಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಕರೆ ನೀಡಿದ್ದಾರೆ. ಭುವನೇಶ್ವರದಲ್ಲಿ ನಡೆದ 'ಬ್ಲ್ಯಾಕ್ ಸ್ವಾನ್ ಶೃಂಗಸಭೆ' ಉದ್ದೇಶಿಸಿ ಮಾತನಾಡಿದ ರಾಷ್ಟ್ರಪತಿಗಳು, ಭಾರತದ ಫಿನ್‌ಟೆಕ್ ಪ್ರಯಾಣವು ನಾವೀನ್ಯತೆಗಾಗಿ ಮಾತ್ರವಲ್ಲದೆ, ಆರ್ಥಿಕ ಸೇರ್ಪಡೆ ಮತ್ತು ಲಿಂಗ ಸಮಾನತೆಗೆ ಕಾರಣವಾಗಿದೆ ಎಂದು ಹೇಳಿದರು. ಲಕ್ಷಾಂತರ ಭಾರತೀಯರಿಗೆ, ಫಿನ್‌ಟೆಕ್ ಜೀವನಾಡಿಯಾಗಿದೆ. ನೇರ ಲಾಭ ವರ್ಗಾವಣೆ, ರೈತರಿಗೆ ಸಕಾಲಿಕ ಪಾವತಿಗಳು ಮತ್ತು ಸಣ್ಣ ವ್ಯವಹಾರಗಳಿಗೆ ತಡೆರಹಿತ ಡಿಜಿಟಲ್ ವಹಿವಾಟುಗಳನ್ನು ಸಕ್ರಿಯಗೊಳಿಸುತ್ತದೆ ಎಂದು ಅವರು ಗಮನಿಸಿದರು. ೫೭ ಕೋಟಿಗೂ ಹೆಚ್ಚು ಜನ್ ಧನ್ ಖಾತೆಗಳನ್ನು ತೆರೆಯಲಾಗಿದೆ. ಶೇಕಡ ೫೬ಕ್ಕಿಂತ ಹೆಚ್ಚು ಮಹಿಳೆಯರು ಹೊಂದಿದ್ದಾರೆ. ಸೈಬರ್ ಬೆದರಿಕೆಗಳ ವಿರುದ್ಧ ಎಚ್ಚರಿಕೆಯಿಂದಿರಬೇಕು. ಡಿಜಿಟಲ್ ಸಾಕ್ಷರತೆ ಮತ್ತು ನೈತಿಕ ತಂತ್ರಜ್ಞಾನ ಅಳವಡಿಕೆಯ ಅಗತ್ಯವಿದೆ. ಮಹಿಳೆಯರನ್ನು ಕೇವಲ ಬಳಕೆದಾರರಾಗಿ ಮಾತ್ರವಲ್ಲದೆ, ಫಿನ್‌ಟೆಕ್ ಪರಿಸರ ವ್ಯವಸ್ಥೆಯಲ್ಲಿ ನಾಯಕರು ಮತ್ತು ಉದ್ಯಮಿಗಳಾಗಿ ನೋಡಬೇಕು ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಹೇಳಿದರು.

**********

ಛತ್ತೀಸ್‌ಗಢದ ಬಸ್ತಾರ್‌ನ ವಿಭಾಗೀಯ ಕೇಂದ್ರವಾದ ಜಗದಲ್ಪುರಕ್ಕೆ ಇಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಭೇಟಿ ನೀಡಲಿದ್ದಾರೆ. ಈ ಸಂದರ್ಭದಲ್ಲಿ ಅವರು ಬಸ್ತಾರ್ ಪಾಂಡಂ ಉತ್ಸವವನ್ನು ಉದ್ಘಾಟಿಸಲಿದ್ದಾರೆ. ಬಳಿಕ ಅವರು ಜಗದಲ್ಪುರದ ಲಾಲ್‌ಬಾಗ್ ಮೈದಾನದಲ್ಲಿ ಆಯೋಜಿಸಲಾಗಿರುವ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಲಿದ್ದಾರೆ. ಈ ವೇಳೆ ಛತ್ತೀಸಗಢ ರಾಜ್ಯಪಾಲ ರಾಮೆನ್ ದೇಕಾ ಮತ್ತು ಮುಖ್ಯಮಂತ್ರಿ ವಿಷ್ಣು ಡಿಯೋಸಾಯಿ ಉಪಸ್ಥಿತರಿರಲಿದ್ದಾರೆ.

**********

ಬೇಟಿ ಬಚಾವೊ ಬೇಟಿ ಪಢಾವೊ ಯೋಜನೆಯು ಸರ್ಕಾರಿ ಸಂಸ್ಥೆಗಳು, ಸಮುದಾಯಗಳು, ಮಾಧ್ಯಮಗಳು, ನಾಗರಿಕ ಸಮಾಜ ಮತ್ತು ಸಾರ್ವಜನಿಕರು ಸೇರಿದಂತೆ ವಿವಿಧ ಪಾಲುದಾರರನ್ನು ಸಜ್ಜುಗೊಳಿಸುವ ಮೂಲಕ ನೀತಿ ಉಪಕ್ರಮದಿಂದಾಗಿ ರಾಷ್ಟ್ರೀಯ ಆಂದೋಲನವಾಗಿ ರೂಪಾಂತರಗೊಂಡಿದೆ ಎಂದು ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಅನ್ನಪೂರ್ಣಾದೇವಿ ಹೇಳಿದ್ದಾರೆ. ಲೋಕಸಭೆಯಲ್ಲಿ ನಿನ್ನೆ ಪ್ರಶ್ನೆಯೊಂದಕ್ಕೆ ಲಿಖಿತ ಉತ್ತರ ನೀಡಿದ ಅವರು, ರಾಷ್ಟ್ರೀಯ ಮಟ್ಟದಲ್ಲಿ ಲಿಂಗಾನುಪಾತವು ೨೦೦೧೪-೧೫ರಲ್ಲಿ ೯೧೮ ರಿಂದ ೨೦೨೪-೨೫ರಲ್ಲಿ ೯೨೯ಕ್ಕೆ ಏರಿಕೆಯಾಗಿದೆ. ಮಾಧ್ಯಮಿಕ ಹಂತದ ಶಾಲೆಗಳಲ್ಲಿ ಬಾಲಕಿಯರ ಒಟ್ಟು ದಾಖಲಾತಿ ಅನುಪಾತವು ೨೦೦೧೪-೧೫ರಲ್ಲಿ ಶೇಕಡ ೭೫.೫೧ ರಿಂದ ೨೦೨೪-೨೫ರಲ್ಲಿ ಶೇಕಡ ೮೦.೨ಕ್ಕೆ ಏರಿಕೆಯಾಗಿದೆ ಎಂದು ತಿಳಿಸಿದರು. ಲಿಂಗಾನುಪಾತ ಮತ್ತು ಮಹಿಳಾ ಸಬಲೀಕರಣಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಲು ಸಹಾಯ ಮಾಡುವ ನಿಟ್ಟಿನಲ್ಲಿ ೨೦೧೫ರ ಜನವರಿ ೨೨ ರಂದು ಬೇಟಿ ಬಚಾವೊ ಬೇಟಿ ಪಢಾವೊ ಯೋಜನೆ ಪ್ರಾರಂಭಿಸಲಾಯಿತು. ಲಿಂಗಾನುಪಾತ ಮತ್ತು ಲಿಂಗಾಧಾರಿತ ತಾರತಮ್ಯಕ್ಕೆ ಸಂಬಂಧಿಸಿದ ತಕ್ಷಣದ ಕಾಳಜಿಗಳನ್ನು ಪರಿಹರಿಸುವುದು ಮಾತ್ರವಲ್ಲದೆ, ಹೆಣ್ಣು ಮಕ್ಕಳ ಹಕ್ಕುಗಳು ಮತ್ತು ಅವಕಾಶಗಳನ್ನು ಖಾತ್ರಿಪಡಿಸುವ ಕಡೆಗೆ ಸಾಂಸ್ಕೃತಿಕ ಬದಲಾವಣೆಯನ್ನು ಬೆಳೆಸುವ ಗುರಿಯನ್ನು ಇದು ಹೊಂದಿದೆ ಎಂದು ಸಚಿವೆ ಅನ್ನಪೂರ್ಣಾದೇವಿ ವಿವರಿಸಿದರು.

**********

ಪ್ರಧಾನಮಂತ್ರಿ ಆವಾಸ್ ಯೋಜನೆ- ಗ್ರಾಮೀಣ, ಅಡಿಯಲ್ಲಿ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ೩ ಕೋಟಿ ೮೭ ಲಕ್ಷಕ್ಕೂ ಹೆಚ್ಚು ಮನೆಗಳನ್ನು ಕೇಂದ್ರ ಸರ್ಕಾರ ಮಂಜೂರು ಮಾಡಿದೆ ಎಂದು ಕೇಂದ್ರ ಗ್ರಾಮೀಣಾಭಿವೃದ್ಧಿ ಖಾತೆ ರಾಜ್ಯ ಸಚಿವ ಡಾ.ಚಂದ್ರಶೇಖರ್ ಪೆಮ್ಮಸಾನಿ ತಿಳಿಸಿದ್ದಾರೆ. ರಾಜ್ಯಸಭೆಯಲ್ಲಿ ಪ್ರಶ್ನೆಯೊಂದಕ್ಕೆ ಲಿಖಿತ ಉತ್ತರ ನೀಡಿದ ಅವರು, ಮಂಜೂರಾದ ಮನೆಗಳ ಪೈಕಿ ೨ ಕೋಟಿ ೯೫ ಲಕ್ಷಕ್ಕೂ ಹೆಚ್ಚು ಮನೆಗಳು ಈ ತಿಂಗಳ ೨ನೇ ತಾರೀಖಿನ ವೇಳೆಗೆ ಪೂರ್ಣಗೊಂಡಿವೆ ಎಂದು ಮಾಹಿತಿ ನೀಡಿದರು. ಕಳೆದ ಐದು ವರ್ಷಗಳಲ್ಲಿ ೨ ಕೋಟಿ ಹತ್ತು ಲಕ್ಷ ೬೭ ಸಾವಿರಕ್ಕೂ ಹೆಚ್ಚು ಮನೆಗಳನ್ನು ಮಂಜೂರು ಮಾಡಲಾಗಿದೆ. ೨೦೨೯ರ ಮಾರ್ಚ್ ವೇಳೆಗೆ ೪ ಕೋಟಿ ೯೫ ಲಕ್ಷ ಮನೆಗಳನ್ನು ನಿರ್ಮಿಸುವ ಗುರಿಯನ್ನು ಕೇಂದ್ರ

ಗ್ರಾಮೀಣಾಭಿವೃದ್ಧಿ ಸಚಿವಾಲಯ ಹೊಂದಿದೆ ಎಂದು ಸಚಿವ ಡಾ.ಚಂದ್ರಶೇಖರ್ ಪೆಮ್ಮಸಾನಿ ತಿಳಿಸಿದರು.

**********

ಒಡಿಶಾದ ಚಾಂಡಿಪುರದಲ್ಲಿರುವ ಇಂಟೆಗ್ರೇಟೆಡ್ ಪರೀಕ್ಷಾ ಕೇಂದ್ರದಿಂದ ಅಗ್ನಿ-೩ ಮಧ್ಯಂತರ ಶ್ರೇಣಿಯ ಖಂಡಾಂತರ ಕ್ಷಿಪಣಿ ಪರೀಕ್ಷೆ ಯಶಸ್ವಿಯಾಗಿದೆ. ಕಾರ್ಯತಂತ್ರ ಪಡೆಗಳ ಕಮಾಂಡನ್ ಮೇಲ್ವಿಚಾರಣೆಯಲ್ಲಿ ಈ ಪರೀಕ್ಷೆಯನ್ನು ನಡೆಸಲಾಯಿತು. ರಕ್ಷಣಾ ಸಂಶೋಧನಾ ಮತ್ತು ಅಭಿವೃದ್ಧಿ ಸಂಸ್ಥೆ - ಡಿಆರ್‌ಡಿಒ ಅಭಿವೃದ್ಧಿಪಡಿಸಿರುವ ಈ ಕ್ಷಿಪಣಿಯು ಎರಡು ಹಂತದ, ಘನ ಇಂಧನ ಚಾಲಿತ ಖಂಡಾಂತರ ಕ್ಷಿಪಣಿಯಾಗಿದ್ದು, ಮೂರು ಸಾವಿರ ಕಿಲೋಮೀಟರ್ ವರೆಗಿನ ಗುರಿಯನ್ನು ಯಶಸ್ವಿಯಾಗಿ ತಲುಪಲಿದೆ. ಈ ಕ್ಷಿಪಣಿಯು ಸಾಂಪ್ರದಾಯಿಕ ಮತ್ತು ಪರಮಾಣು ಸಿಡಿತಲೆಗಳನ್ನು ಸಾಗಿಸುವ ಸಾಮರ್ಥ್ಯ ಹೊಂದಿದೆ.

**********

ಪಾಕಿಸ್ತಾನದ ರಾಜಧಾನಿ ಇಸ್ಲಾಮಾಬಾದ್‌ನ ಶಿಯಾ ಮಸೀದಿಯಲ್ಲಿ ನಿನ್ನೆ ನಡೆದ ಆತ್ಮಾಹುತಿ ಬಾಂಬ್ ದಾಳಿಯಲ್ಲಿ ಮೃತಪಟ್ಟವರ ಸಂಖ್ಯೆ ೩೧ಕ್ಕೆ ಏರಿಕೆಯಾಗಿದೆ. ಘಟನೆಯಲ್ಲಿ ೧೭೦ ಜನರು ಗಾಯಗೊಂಡಿದ್ದಾರೆ. ಗಾಯಾಳುಗಳನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿದೆ. ಶೆಹಜಾದ್ ಪಟ್ಟಣದ ತರ್ಲೈ ಇಮಾಮ್‌ಬರ್ಗಾ ಪ್ರದೇಶದಲ್ಲಿ ಸ್ಫೋಟ ಸಂಭವಿಸಿದೆ. ಆತ್ಮಾಹುತಿ ದಾಳಿಕೋರನನ್ನು ಇಮಾಮ್‌ಬರ್ಗಾದ ದ್ವಾರದಲ್ಲಿ ಪೊಲೀಸರು ತಡೆದು ನಿಲ್ಲಿಸಲು ಪ್ರಯತ್ನಿಸಿದರು. ಆದರೆ, ಆತ ತನ್ನನ್ನು ತಾನು ಸ್ಫೋಟಿಸಿಕೊಂಡ ಎಂದು ಸ್ಥಳೀಯ ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ. ಇಸ್ಲಾಮಾಬಾದ್ ಮಸೀದಿಯಲ್ಲಿ ನಡೆದ ಬಾಂಬ್ ದಾಳಿಯನ್ನು ಭಾರತ ಖಂಡಿಸಿದ್ದು, ಅದರಿಂದ ಉಂಟಾದ ಜೀವಹಾನಿಗೆ ಸಂತಾಪ ಸೂಚಿಸಿದೆ. ಪಾಕಿಸ್ತಾನವು ತನ್ನ ಸಾಮಾಜಿಕ ರಚನೆಯನ್ನು ಕಾಡುತ್ತಿರುವ ಸಮಸ್ಯೆಗಳನ್ನು ಗಂಭೀರವಾಗಿ ಪರಿಗಣಿಸುವ ಬದಲು, ತನ್ನ ಸ್ಥಳೀಯ ಕಾಯಿಲೆಗಳಿಗೆ ಇತರರನ್ನು ದೂಷಿಸುವ ಮೂಲಕ ತನ್ನನ್ನು ತಾನು ಮೋಸಗೊಳಿಸಲು ಆಯ್ಕೆ ಮಾಡಿಕೊಳ್ಳುತ್ತಿರುವುದು ದುರದೃಷ್ಟಕರ ಎಂದು ವಿದೇಶಾಂಗ ಸಚಿವಾಲಯ ಹೇಳಿಕೆಯಲ್ಲಿ ತಿಳಿಸಿದೆ. ಭಾರತವು ಅಂತಹ ಯಾವುದೇ ಆಧಾರರಹಿತ ಮತ್ತು ಅರ್ಥಹೀನ ಆರೋಪಗಳನ್ನು ತಿರಸ್ಕರಿಸುತ್ತದೆ ಎಂದು ಸಚಿವಾಲಯ ತಿಳಿಸಿದೆ.

**********

ಕೇಂದ್ರ ಗೃಹ ಮತ್ತು ಸಹಕಾರ ಸಚಿವ ಅಮಿತ್ ಶಾ ಅವರು ಇಂದು ಸಂಜೆ ಛತ್ತೀಸ್‌ಗಢಕ್ಕೆ ಮೂರು ದಿನಗಳ ಭೇಟಿಗಾಗಿ ರಾಯ್‌ಪುರಕ್ಕೆ ಆಗಮಿಸಲಿದ್ದಾರೆ. ಭೇಟಿಯ ಸಮಯದಲ್ಲಿ, ಅವರು ಛತ್ತೀಸ್‌ಗಢದ ಆಂತರಿಕ ಭದ್ರತಾ ಪರಿಸ್ಥಿತಿ ಮತ್ತು ಎಡಪಂಥೀಯ ಉಗ್ರವಾದವನ್ನು ಪರಿಶೀಲಿಸಲಿದ್ದಾರೆ ಹಾಗೂ ರಾಯ್‌ಪುರ ಮತ್ತು ಜಗದಲ್‌ಪುರದಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ. ಸಚಿವ ಅಮಿತ್ ಶಾ ಅವರು ಇಂದು ಸಂಜೆ ರಾಯ್‌ಪುರದಲ್ಲಿ ಹಿರಿಯ ಅಧಿಕಾರಿಗಳೊಂದಿಗೆ ಮಹತ್ವದ ಸಭೆ ನಡೆಸಲಿದ್ದಾರೆ. ಈ ಸಂದರ್ಭದಲ್ಲಿ ರಾಜ್ಯಕ್ಕೆ ಸಂಬಂಧಿಸಿದ ವಿವಿಧ ಆಡಳಿತ ಮತ್ತು ಭದ್ರತಾ ಸಂಬಂಧಿತ ವಿಷಯಗಳ ಕುರಿತು ಚರ್ಚಿಸಲಾಗುವುದು. ನಾಳೆ ಅವರು ರಾಯ್‌ಪುರದಲ್ಲಿ ಎಡಪಂಥೀಯ ಉಗ್ರವಾದದ ಕುರಿತು ಉನ್ನತ ಮಟ್ಟದ ಭದ್ರತಾ ಸಭೆಯ ಅಧ್ಯಕ್ಷತೆ ವಹಿಸಲಿದ್ದಾರೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಹಿರಿಯ ಅಧಿಕಾರಿಗಳು, ಭದ್ರತಾ ಸಂಸ್ಥೆಗಳ ಪ್ರತಿನಿಧಿಗಳು ಸಭೆಯಲ್ಲಿ ಭಾಗವಹಿಸಲಿದ್ದಾರೆ. ಬಳಿಕ ರಾಯ್‌ಪುರದಲ್ಲಿ ಆಯೋಜಿಸಲಾಗುವ ರಾಷ್ಟ್ರೀಯ ಸಮಾವೇಶದಲ್ಲಿ ಭಾಗವಹಿಸಲಿದ್ದಾರೆ. ಇದೇ ೯ ರಂದು ಜಗದಲ್‌ಪುರದಲ್ಲಿ ನಡೆಯಲಿರುವ ಬಸ್ತಾರ್ ಪಾಂಡಮ್ ಉತ್ಸವದ ಸಮಾರೋಪ ಸಮಾರಂಭದಲ್ಲಿ ಕೇಂದ್ರ ಗೃಹ ಸಚಿವರು ಭಾಗವಹಿಸಲಿದ್ದಾರೆ.

**********

ಭಾರತ ಎಐ ಇಂಪ್ಯಾಕ್ಟ್ ಶೃಂಗಸಭೆ ೨೦೨೬ ರ ಭಾಗವಾಗಿ ಆಯೋಜಿಸಲಾದ ಕೃತಕ ಬುದ್ಧಿಮತ್ತೆ ಮತ್ತು ಅದರ ಪ್ರಭಾವದ ಕುರಿತಾದ ಸಂಶೋಧನಾ ವಿಚಾರ ಸಂಕಿರಣವು ರಾಷ್ಟ್ರೀಯ ಮತ್ತು ಜಾಗತಿಕ ಸಂಶೋಧನಾ ಸಮುದಾಯದಿಂದ ೨೫೦ ಕ್ಕೂ ಹೆಚ್ಚು ಸಲ್ಲಿಕೆಗಳನ್ನು ಸ್ವೀಕರಿಸಿದೆ. ಈ ತಿಂಗಳ ೧೮ ರಂದು ನವದೆಹಲಿಯಲ್ಲಿ ನಡೆಯಲಿರುವ ಈ ಶೃಂಗಸಭೆಯು ಜಾಗತಿಕ ದಕ್ಷಿಣ ಪೋಸ್ಟರ್ ಟ್ರ್ಯಾಕ್ ಅಡಿಯಲ್ಲಿ ೩೦ ಆಯ್ದ ಪೋಸ್ಟರ್‌ಗಳನ್ನು, ಇಂಡಿಯಾ ಫೋರಮ್ ಶೋಕೇಸ್‌ನಿಂದ ೧೫ ಮತ್ತು ವಿದ್ಯಾರ್ಥಿಗಳ ಪ್ರದರ್ಶನದ ಅಡಿಯಲ್ಲಿ ೧೫ ಆಯ್ದ ಪೋಸ್ಟರ್‌ಗಳನ್ನು ಒಳಗೊಂಡಿರುತ್ತದೆ. ಜಾಗತಿಕ ದಕ್ಷಿಣ ಸಂಶೋಧನೆ ಮತ್ತು ಪೋಸ್ಟರ್‌ಗಳ ಪ್ರದರ್ಶನದ ಸಮಯದಲ್ಲಿ, ಜಾಗತಿಕ ದಕ್ಷಿಣದ ವಿದ್ಯಾರ್ಥಿಗಳು ಮತ್ತು ಸಹಯೋಗಿ ತಂಡಗಳಿಂದ ಸಂಶೋಧನಾ ಪೋಸ್ಟರ್‌ಗಳ ಪ್ರದರ್ಶನ ಇರುತ್ತದೆ. ಕಾರ್ಯಕ್ರಮ, ವಿಷಯಾಧಾರಿತ ಗಮನ

ಮತ್ತು ಭಾಗವಹಿಸುವಿಕೆಯ ವಿಧಾನಗಳನ್ನು ಒಳಗೊಂಡಂತೆ ಎಐ ಇಂಪ್ಯಾಕ್ಟ್ ಶೃಂಗಸಭೆ ೨೦೨೬ ರ ಕುರಿತು ಹೆಚ್ಚಿನ ವಿವರಗಳು ಅಧಿಕೃತ ಶೃಂಗಸಭೆಯ ವೆಬ್‌ಸೈಟ್ - https://impact.indiaai.gov.in ನಲ್ಲಿ ಲಭ್ಯವಿದೆ.

**********

ಭಾರತ ತಂಡ ೧೯ ವರ್ಷದೊಳಗಿನವರ ಐಸಿಸಿ ಏಕದಿನ ವಿಶ್ವಕಪ್ ಕ್ರಿಕೆಟ್ ಚಾಂಪಿಯನ್ ಆಗಿ ಹೊರಹೊಮ್ಮಿದೆ. ಬಿಂಬ್ವಾಬೆಯ ಹರಾರೆ ಸ್ಪೋರ್ಟ್ಸ್ ಕ್ಲಬ್ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಿನ್ನೆ ನಡೆದ ಫೈನಲ್ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಭಾರತ ತಂಡ ನಿಗದಿತ ೫೦ ಓವರ್‌ಗಳಲ್ಲಿ ೯ ವಿಕೆಟ್ ನಷ್ಟಕ್ಕೆ ೪೧೧ ರನ್ ಗಳಿಸಿದೆ. ೧೪ ವರ್ಷದ ವೈಭವ್ ಸೂರ್ಯವಂಶಿ ೮೦ ಎಸೆತಗಳಲ್ಲಿ ಸ್ಫೋಟಕ ೧೭೫ ರನ್‌ಗಳನ್ನು ಸಿಡಿಸಿ, ತಂಡದ ಬೃಹತ್ ಮೊತ್ತಕ್ಕೆ ಕಾರಣರಾದರು. ಗೆಲುವಿನ ಗುರಿ ಬೆನ್ನತ್ತಿದ ಇಂಗ್ಲೆಂಡ್, ೪೦.೨ ಓವರ್‌ಗಳಲ್ಲಿ ೩೧೧ ರನ್‌ಗಳಿಗೆ ತನ್ನೆಲ್ಲಾ ವಿಕೆಟ್‌ಗಳನ್ನು ಕಳೆದುಕೊಂಡಿತು. ಈ ಮೂಲಕ ಭಾರತ ತಂಡ ೧೦೦ ರನ್‌ಗಳಿಂದ ಭರ್ಜರಿ ಗೆಲವು ದಾಖಲಿಸಿತು. ವೈಭವ್ ಸೂರ್ಯವಂಶಿ ಪಂದ್ಯ ಶ್ರೇಷ್ಠ ಹಾಗೂ ಸರಣಿ ಶ್ರೇಷ್ಠ ಎರಡೂ ಪ್ರಶಸ್ತಿಗಳಿಗೆ ಭಾಜನರಾದರು. ಚಾಂಪಿಯನ್ ಆಗಿ ಹೊರಹೊಮ್ಮಿದ ೧೯ ವರ್ಷದೊಳಗಿನವರ ಭಾರತ ತಂಡವನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು, ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಸೇರಿದಂತೆ ಗಣ್ಯರು ಅಭಿನಂದಿಸಿದ್ದಾರೆ.

*****END*****